HALF AN HOUR DISCUSSION

Reg : Working of Kandasaries in Bidar District

MR. SPEAKER.—Sri Bheemanna Khandre to raise Half an hour discussion on the matters arising out of replies given to Starred question No. 296 (452) of 25th list on 15th June 1982 regarding the working of Khandasaries in Bidar district.

ಶ್ರೀ ಭೀಮಣ್ಣ ಖಂಡ್ರೆ.—ಸನ್ಮಾನ್ಯ ಅಧ್ಯಕ್ಷರೇ ಬೀದರ್ ಜಿಲ್ಲೆಯ ಖಂಡಸಾರಿ ಫ್ಯಾಕ್ಟರಿಗಳನ್ನು ಮಾಡಲು ೧೨ ಜನರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಇದರ ಬಗ್ಗೆ ಯಾವಾಗಲೂ ಸಹ ತಕರಾರು ಮಾಡುತ್ತಲೇ ಇದ್ದಾರೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೩೮ ಖಂಡಸಾರಿ ಫ್ಯಾಕ್ಟರಿಗಳು ಇವೆ. ಆದರೆ ನಮ್ಮ ಬೀದರ್ ಜಿಲ್ಲೆಯಲ್ಲಿಯೇ ಸುಮಾರು ೧೨ ಖಂಡಸಾರಿ ಫ್ಯಾಕ್ಟರಿಗಳು ಇವೆ. ಮನೆಯಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ೧೭-೩-೮೧ರಲ್ಲಿ ಕೇಳಿದ ಪ್ರಶ್ನೆ ಮತ್ತೆ ಈ ವರ್ಷ ಬಂದಿದೆ. ಇವತ್ತು ನಮ್ಮ ಬೀದರ್ ಜಿಲ್ಲೆಯಲ್ಲಿ ಸುಮಾರು ೧೨ ಖಂಡಸಾರಿ ಫ್ಯಾಕ್ಟರಿಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಮತ್ತು ನಮ್ಮ ಶುಗರ್ ಫ್ಯಾಕ್ಟರಿಯಲ್ಲಿ ಈಗ ಸುಮಾರು ೫೦ ಲಕ್ಷ ಜನ ಷೇರುದಾರರು ಇದ್ದಾರೆ. ಅಲ್ಲಿ ಕೆಲಸ ಬಹಳ ಚನ್ನಾಗಿ ನಡೆಯುತ್ತಿದೆ. ಈ ಭಾಗ ಕಬ್ಬಿನ ರಿಜರ್ವೇಷನ್ ಏರಿಯಾ ಅಂದಮೇಲೆ ಇಲ್ಲಿ ಕಬ್ಬನ್ನು ಜಾಸ್ತಿಯಾಗಿ ಬೆಳೆಯುತ್ತಾರೆ. ಈ ಖಂಡಸಾರಿ ಫ್ಯಾಕ್ಟರಿಗಳ ಮೊದಲ ಮೂರು ವರ್ಷಗಳ ಕ್ಯಾಪಾಸಿಟಿ ಸುಮಾರು ೨.೫೦ ಲಕ್ಷ ಆಮೇಲೆ ೧.೮೦ ಲಕ್ಷ ಮತ್ತೆ ಕಬ್ಬು ಬೆಳೆಗಾರರ ವಿಷಯದಲ್ಲಿ ಸುಮಾರು ೩೦೦ ಕೇಸ್‌ಗಳು ರೈತರ ವಿರುದ್ಧ ತೀರ್ಮಾನವಾಗಿವೆ. ಸುಮಾರು ೧೮ ಸಾವಿರ ಎಕರೆ ಜಮೀನಿನಲ್ಲಿ ಬೆಳೆಯುವಂತಹ ಕಬ್ಬನ್ನು ನಾವು ಸರ್ಕಾರಕ್ಕೆ ಕೊಡುತ್ತೇವೆ ಎಂದು ಹೇಳಿದ್ದೇವೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಒಂದು ಹೈ ಪವರ್ ಕಮಿಟಿಯನ್ನು ಮಾಡುತ್ತೇವೆಂದು ನಮ್ಮ ಮಾನ್ಯ ಮಂತ್ರಿಗಳು ಹೇಳಿದರು. ಗೌರ್ನಮೆಂಟ್ ಆಫ್ ಇಂಡಿಯಾದ ಸರ್ಕ್ಯೂಲರ್ ಪ್ರಕಾರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಸುಮಾರು ೪೫ ದಿವಸಗಳು ಆದ ನಂತರ ಕಬ್ಬು ಕೊಡಬೇಕೆಂದು ಹೇಳಿದ್ದಾರೆ ಏಕೆಂದರೆ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ರಿಕವರಿ ಬಹಳ ಕಡಿಮೆ. ಶ್ರೀಮಾನ್ ಬಿ. ಎಲ್. ಗೌಡರ ಅಧ್ಯಕ್ಷತೆಯಲ್ಲಿ ಒಂದು ಹೈ ಪವರ್ ಕಮಿಟಿಯನ್ನು ನೇಮಕ ಮಾಡಿ ಅವರ ಪ್ರಕಾರ ಅವರು ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ೯೦ ದಿವಸಗಳು ಸತತವಾಗಿ ನಷ್ಟವಾದರೆ ಆದನ್ನು ಮುಚ್ಚಬೇಕೆಂದು ಕೇಂದ್ರ ಸರ್ಕಾರದ ಒಂದು ಸರ್ಕ್ಯೂಲರ್ ಸಹ ಇದೆ. ಆದರೆ ಇದುವರೆವಿಗೂ ಆ ಖಂಡಸಾರಿ ಫ್ಯಾಕ್ಟರಿಗಳನ್ನು ತಾವು ಮುಚ್ಚುವುದಕ್ಕೆ ಆಗಲಿಲ್ಲ. ತಾವು ಅವರಿಗೆ ಮತ್ತೆ ಲೈಸೆನ್ಸ್ ಕೊಟ್ಟಿದ್ದೀರಿ. ಆದರೆ ನಮ್ಮ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ರೀತಿ ಹೇಳಿದ್ದಾರೆ ಅದು ಏನೆಂದರೆ

(c) Whether it is a fact that almost all the Khandasaries in Bidar District are continuing their operations beyond the licenced period without possession valid extension of licences?

The answer given is that no such cases are reported.

(d) Whether it is a fact that the representatives of the Co-operative sugar Factory Bidar have moved the Government not to extend their licenced period? The answer given is-Yes.

Whether it is a fact that the representatives of the Co-operative Sugar Factory, Bidar have moved the Government not to extend their licenced period.

ನಾವು ಕಬ್ಬನ್ನು ಖಂಡಸಾರಿಗೆ ಕೊಡಲು ಲೈಸೆನ್ಸ್ ಕೊಡಬೆ ಕೆಂದು ಹೇಳಿದ್ದೇವೆಯೇ ? ಮಾನ್ಯ ಸಚಿವರಾದಂಥ ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದರು ಅವರನ್ನು ಬಂದ್ ಮಾಡುವಂತೆ ಬರೆದಿದ್ದೇವೆಂದು.

(e) Whether it is also a fact that the Hon'ble Chief Minister of Karnataka and Hon'ble Minister for Co-Operation ordered not to extend the licences of Khandasaries in Bidar District during the year 1980-81 on due representation of Bidar Co-operative Sugar Factory and whether these orders are complied with ?

The answer is that the Renewal of the licences to Khandasaries in Bidar District during the year 1980-81 was under consideration of the Government. In the mean while the Director of Sugar has brought to the notice of the Government the directions of the High Court of Karnataka ಎಂದು ಹೇಳಿ ನಮ್ಮ ಆರ್ಥ ಮಂತ್ರಿಗಳು ನನಗೆ ಉತ್ತರ ಕೊಡುವಾಗ ನನ್ನನ್ನು ಮಿಸ್ ಗೈಡ್ ಮಾಡಿದ್ದಾರೆ. Sugar federation representatives ನವರು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆಯೇ ? They deliberately wanted to extend the period. That is the point.

6-00 P. M.

I will read question "g" which says "Whether there is any court order permitting the working of Khandasaries in Bidar District..." The answer given to it is : "(g) In the Interim Order made on 27-11-1980 the Court directed that the Director of Sugar should dispose of the application filed before him expeditiously and he should not take proceedings for closure of Khandasari Units till the disposal of the applications, on the ground that the units do not have necessary licences. ೧೨ ಖಂಡಸಾರಿ ಯೂನಿಟ್ಸ್‌ಗೆ ೯೦ ದಿವಸ ಟೈಂ ಮುಗಿದ ಮೇಲೆ ನೀವು ಅದನ್ನು ಕ್ಲೋಸ್ ಮಾಡಿ ಎಂದು ಹೇಳಿದಾಗ ಅವರು ಬರೆಯುತ್ತಾರೆ. ಅದನ್ನು ಯಾವಾಗ ಕ್ಲೋಸ್ ಮಾಡಬೇಕು? ಜಿಲ್ಲಾಧಿಕಾರಿಗಳು ಹೇಳುತ್ತಾರೆ, ಆರ್ಡರ್ ಬಂದರೆ ನಾವು ಕ್ಲೋಸ್ ಮಾಡಿಸುತ್ತೇವೆ ಅಂತ. ಇವರು ಏನು ಹೇಳುತ್ತಾರೆಂದರೆ ಜಿಲ್ಲಾಧಿಕಾರಿಯವರು ಹೇಳಿದರೆ ನಾವು ಕ್ಲೋಸ್ ಮಾಡುತ್ತೇವೆ ಎಂದು. ಅವರ ಲೈಸೆನ್ಸ್ ಮುಗಿದಮೇಲೆ ಅವನ್ನು ಕ್ಲೋಸ್ ಮಾಡಬೇಕಾದ್ದು ಜಿಲ್ಲಾಧಿಕಾರಿಯವರ ಕೆಲಸ. ಆದರೆ ಎಲ್ಲಿಯವರೆಗೆ ಈ ರೀತಿಯ ಆರ್ಡರ್ ಆಗುವುದಿಲ್ಲ ಅಲ್ಲಿಯವರೆಗೂ ಅದನ್ನು ಬಂದ್ ಮಾಡುವುದಕ್ಕಾಗುವುದಿಲ್ಲ ಎಂದು ಜಿಲ್ಲಾಧಿಕಾರಿಯವರು ಹೇಳುತ್ತಾರೆ. ಈ ವಿಷಯವನ್ನು ನಾವು ಏಕೆ ಚರ್ಚೆ ಮಾಡಲಿಕ್ಕೆ ಹೋಗಿದ್ದೆವು ಅಂದರೆ ನಮ್ಮ ಏರಿಯಾದಿಂದ ಕಬ್ಬನ್ನು ಒಯ್ದು ಖಂಡಸಾರಿ ಫ್ಯಾಕ್ಟರಿಗಳನ್ನು ನಡೆಸಲಾಗುತ್ತಿತ್ತು. ಆದ್ದರಿಂದ ನಮ್ಮ ಫ್ಯಾಕ್ಟರಿ ಬಂದ್ ಮಾಡಬೇಕಾಗಿದೆ. ಸ್ವಾಮಿ, ಇಲ್ಲಿ ಸರ್ಕಾರಕ್ಕೆ ನಷ್ಟ ಮಾಡಿ, ಯಾರೋ ಒಬ್ಬ ಇಂಡಿವಿಜುಯಲ್ ಮಾರ್ವಾಡಿಗೆ ಫಾಯಿದೆ ಮಾಡುವ ಸಲುವಾಗಿ ಇವರು ಲೈಸೆನ್ಸ್ ಇಲ್ಲದೆ ಫ್ಯಾಕ್ಟರಿಯನ್ನು ನಡೆಸಿದ್ದಾರೆಂದು ನಾನು ಹೇಳಬೇಕಾಗಿದೆ. ಆದ್ದರಿಂದ ಈ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು —ನಿಮ್ಮ ಪ್ರಶ್ನೆಗೆ ಸಚಿವರ ಉತ್ತರ ಇನ್ನು ಕೇವಲ ಅರ್ಧ ಗಂಟೆಯಲ್ಲಿ ಮುಗಿಯಬೇಕಾಗಿದೆ. ಹೇಳಿದ್ದನ್ನೇ ಪುನಃ ಪುನಃ ಹೇಳುವುದಕ್ಕೆ ಹೋಗಬೇಡಿ. ಹೆಚ್ಚು ಕಾಲಾವಕಾಶ ಇಲ್ಲದಿರುವುದರಿಂದ ನಿಮಗೆ ಏನು ಬೇಕೋ ಅದನ್ನು ಮಾತ್ರ ಕೇಳಿ ಸಚಿವರಿಂದ ಸರಿಯಾದ ಉತ್ತರವನ್ನು ಪಡೆಯಿರಿ. ಓದಿದ್ದನ್ನೇ ಓದಿ ಹೇಳುತ್ತಾ ಹೋದರೆ ಅದರಿಂದ ಏನು ಪ್ರಯೋಜನ ?

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ತಾ: ೨೭–೧೧–೮೦ರಲ್ಲಿ ಈ ೧೨ ಖಂಡಸಾರಿ ಯೂನಿಟ್‌ಗಳು ಹೈಕೋರ್ಟಿಗೆ ಹೋದವು. ಹೈಕೋರ್ಟಿನಿಂದ ಏನು ಡೈರೆಕ್ಷನ್ ಬಂತು ಅಂದರೆ, ಇದನ್ನೆಲ್ಲಾ ಆಕ್ಪೈರ್ ಮಾಡಿಕೊಳ್ಳಬೇಕು ಎಂದು. ಸ್ವಾಮಿ, ಇದಕ್ಕೆ ಇರುವುದೇ ೩ ತಿಂಗಳ ಕಾಲಾವಧಿ. ೪ ತಿಂಗಳಾದರೂ ಇವುಗಳ ಲೈಸೆನ್ಸನ್ನು ನೋಡದೆ ಹಾಗೆಯೇ ಬಿಟ್ಟು ಹೈಕೋರ್ಟ್ ನೆಪ ಮಾಡಿ ಈ ರೀತಿ ಮಾಡಿದ್ದಾರೆಂದು ನನಗನಿಸುತ್ತದೆ. ತಾವು ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕು. ಖಂಡಸಾರಿಗಳಿಂದ ಕೋ ಆಪರೇಟಿವ್ ಷುಗರ್ ಫ್ಯಾಕ್ಟರಿಗೆ ಏನು ಲಾಸ್ ಆಗಿದೆ ಇದರ ಬಗ್ಗೆ ಕೂಡ ತಾವು ವಿಚಾರಮಾಡಿ ತಿಳಿದು ಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರವನ್ನು ನಾನು ಸಭೆಯ ಮೂಲಕ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ನಾನು ಕೇಳಿದ್ದ ಪ್ರಶ್ನೆಗೆ ತಾವು ಉತ್ತರ ಕೊಟ್ಟಿರುವುದನ್ನು ನೋಡಿದರೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಆಗಿದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ವಿಚಾರ ಮಾಡಬೇಕೆಂದು ಹೇಳಬಯಸುತ್ತೇನೆ. ಅಷ್ಟೇ ಅಲ್ಲ, ತಾವು ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ತಾಳೆ ಹಾಕಿ ನೋಡಿದರೆ ಒಂದಕ್ಕೊಂದು ಸಂಬಂಧವೇ ಬರುತ್ತಿಲ್ಲ. ಉದಾಪರಣೆಗೆ ಹೇಳುವುದಾದರೆ, ೪೦೦ ಟನ್ ಕ್ರಷ್ ಆಗಿದ್ದರೆ ತಾವು ಇಲ್ಲಿ ೧೫೦ ಟನ್ ಅಂತ ಲೆಕ್ಕದಲ್ಲಿ ಕೊಟ್ಟಿದ್ದೀರಿ. ಇದಕ್ಕೆ ಅಲಾಟ್‌ಮೆಂಟ್ ಕೊಟ್ಟಿದ್ದು ೪೦೦ ಟನ್. ಅದು ಎಲ್ಲಿಂದ ಬಂತು ಅಂತ ಕೇಳಿದರೆ ಅದಕ್ಕೆ ತಾವು ಉತ್ತರವನ್ನು ಕೊಡಲಿಲ್ಲ. ಈ ರೆಕಾರ್ಡ್‌ನಲ್ಲಿ ನೋಡಿದರೆ ಈ ಖಂಡಸಾರಿಗಳು ಯಾವ ರೀತಿ ಕೆಲಸ ಮಾಡುತ್ತಿವೆ ? ಯಾವ ರೀತಿ ಬೆಟರ್‌ಮೆಂಟ್ ಲೆವಿ ಸಿಕ್ಕುತ್ತಿದೆ? ಯಾವ ರೀತಿ ಆದಾಯ ಬರುತ್ತದೆ? ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆ ಎಂಬುದು ಗೊತ್ತಾಗುತ್ತದೆ.

ಸ್ವಾಮಿ, ನಾನು ಇವತ್ತಿನ ದಿವಸ ಕೇಳಿರತಕ್ಕ ೪೫೨ ಮತ್ತು ೪೫೫ ಈ ಎರಡು ಪ್ರಶ್ನೆಗಳು ಖನಿವೆ ಇದರ ಬಗ್ಗೆ ತಾವು ಎನ್‌ಕ್ವೈರಿ ಮಾಡಬೇಕು. ಏಕೆಂದರೆ, ಇಲ್ಲಿ ಒಂದಕ್ಕೊಂದು ತಾಳೆ ಆಗುತ್ತಿಲ್ಲ. ಇದರ ಬಗ್ಗೆ ಅಕೌಂಟ್ಸ್ ಇಲ್ಲ. ಖಂಡಸಾರಿಗಳವರ ಮೇಲೆ ತಮ್ಮ ಸೂಪರ್‌ವಿಷನ್ ಇಲ್ಲ. ಆದ್ದರಿಂದ ತಾವು ಇದನ್ನು ಎನ್‌ಕ್ವೈರಿ ಮಾಡಬೇಕು ಮತ್ತು ಇದಕ್ಕೆ ಯಾರು ಜವಾಬ್ದಾರರು ಎಂಬುದನ್ನು ತಿಳಿದು ಕೊಂಡು ಇನ್ನು ಮುಂದೆ ಈ ಪ್ರಕಾರ ಆಗದಂತೆ ನೋಡಿಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರ ದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮಾನ್ಯ ಹಣಕಾಸಿನ ಸಚಿವರು)—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಸರ್ಕಾರದವರು ಕೊಟ್ಟಿಂಥ ಉತ್ತರ ಸರಿಯಾಗಿಲ್ಲವೆಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅದು ಅವರಿಗೆ ತೃಪ್ತಿಯಾಗಿಲ್ಲವಂತೆ. ಅವರು ಕೇಳಿರತಕ್ಕ ಪ್ರಶ್ನೆಯಲ್ಲಿ ಸಚಿವರು ಕೊಟ್ಟಿಂಥ ಆದೇಶ ಏನಿದೆ ಅದನ್ನು ಡೈರೆಕ್ಟರ್ ಆಫ್ ಷುಗರ್ ಕಂಪನೀಸ್ ಅವರು ಸರಿಯಾಗಿ ಪಾಲನೆ ಮಾಡಿಲ್ಲವೆಂದು ವಾದಮಾಡಿದ್ದಾರೆ. ಆದರೆ ಅದು ವ್ಯಕ್ತಿಗತವಾಗಿ ಅಲ್ಲ. ಆದರೆ ಅದು ನಮ್ಮ ದೃಷ್ಟಿಯಲ್ಲಿ ಸರಿಯಲ್ಲ. ಏಕೆಂದರೆ ಯಾವುದೇ ರೀತಿಯ ಮಾಹಿತಿಯನ್ನು ಅಧಿಕಾರಿಗಳು ತಾರದೇ ಇಲ್ಲ. ಲೈಸೆನ್ಸ್ ಬಗ್ಗೆ ಹೈ ಕೋರ್ಟ್‌ನವರು ಆದೇಶವನ್ನು ಕೊಟ್ಟಿರುವುದು ತಾ. ೫–೧೨–೮೦ರಲ್ಲಿ. ಅವರು ಏನು ಹೇಳಿದ್ದಾರೆಂದರೆ ಡೈರೆಕ್ಟರ್ ಆಫ್ ಷುಗರ್ ಕಂಪನೀಸ್ ಸರ್ಕಾರದ ಖಂಡಸಾರಿ ಯೂನಿಟ್‌ಗಳನ್ನು ವ್ಯಾಲಿಡ್ ಲೈಸೆನ್ಸ್ ಇಲ್ಲವೆಂದು ಮುಚ್ಚಬಾರದೆಂದು ಅವರು ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅಲ್ಲದೆ ಅವರು ಇನ್ನೂ ಒಂದು ವಿಷಯ ಏನು ಹೇಳಿದ್ದಾರೆಂದರೆ, ಯಾರು ಅರ್ಜಿಗಳನ್ನು ಹಾಕಿದ್ದಾರೆ ಅದನ್ನು ಅದಷ್ಟು ಬೇಗ ವಿಲೇವಾರಿ ಮಾಡಬೇಕೆಂದು ಆಪ್ಪಣೆ ಕೊಟ್ಟಿದ್ದಾರೆ. ಹೈಕೋರ್ಟಿನವರು ಆಪ್ಪಣೆ ಕೊಟ್ಟಿಂಥ ಸಂದರ್ಭದಲ್ಲಿ ನಮ್ಮ ಹತ್ತಿರ ೯ ಖಂಡಸಾರಿಗೆ ಸಂಬಂಧಪಟ್ಟಿಂತೆ ಅರ್ಜಿಗಳು Nine applications are pending before the High Court and the High Court ordered that the applications of Khandasari Units should be expedited ೯ ಅರ್ಜಿಗಳು ಹೈ ಕೋರ್ಟಿನಲ್ಲಿದ್ದುವು. ೪ ತಿಂಗಳವರೆಗೆ ಸರ್ಕಾರೀ ಅಧಿಕಾರಿಗಳು ಸರ್ಕಾರದ ಆಪ್ಪಣೆಯನ್ನು ಪಾಲನೆ ಮಾಡಲಿಲ್ಲವೆಂಬ ಒಂದು ವಾದ ಇದೆ. Licences were granted between 10th & 16th December, 1980. ೫ ರಿಂದ ೧೧ ದಿವಸ ದೊಳಗೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಬೀದರ್‌ನ ಡೆಪ್ಯುಟಿ ಕಮಿಷನರ್‌ರವರು ಸರ್ಕಾರಕ್ಕೆ ಕೊಟ್ಟ ಮಾಹಿತಿಯ ಪ್ರಕಾರ ಆ ಸಂದರ್ಭದಲ್ಲಿ ೧೨ ಸಾವಿರ

tonnes of sugar cane is within the reserved area. ಔಟ್ ಸೈಡ್ ದಿ ರಿಸರ್ವ್ಡ್ ಏರಿಯ ೨೭ ಸಾವಿರ ಟನ್ ಷುಗರ್‌ಕೇನ್ ಇತ್ತು. ೧೨ ಸಾವಿರ ಟನ್ ರಿಸರ್ವ್ಡ್ ಏರಿಯಾದ ಒಳಗಡೆ ಇತ್ತು.

ಇನ್ನು ಸರ್ಕಾರದ ಅಡ್ವೊಕೇಟ್ ಜನರಲ್‌ರವರನ್ನು ನಾವು ಕನ್ಸಲ್ಟ್ ಮಾಡಿ The rejection of applications was communicated to the Parties on 23-3-81. ಅಪ್ಲಿಕೇಷನ್‌ಗಳನ್ನು ಡಿಸ್‌ಪೋಸ್ ಮಾಡುವುದಕ್ಕೆ ಸರ್ಕಾರದವರು ೧೨ ದಿವಸ ಕಾಲವನ್ನು ತೆಗೆದುಕೊಂಡರು. ಆದರೆ ಮಾನ್ಯ ಸದಸ್ಯರು ಹೇಳಿದ ಪ್ರಕಾರ ೪ ತಿಂಗಳಲ್ಲ. ಅರ್ಜಿಗಳನ್ನು ಪ್ರೋಸೆಸ್ ಮಾಡಿದ್ದು, ರಿಜೆಕ್ಟ್ ಮಾಡಿದ್ದೂ ಎಲ್ಲಾ ಸೇರಿ ನಮಗೆ ತೆಗೆದುಕೊಂಡ ಸಮಯ ಎಂದರೆ ಕೇವಲ ೧೨ ದಿವಸ ಮಾತ್ರ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ೪ ತಿಂಗಳಲ್ಲ. ಆದ್ದರಿಂದ ಮಾನ್ಯ ಸದಸ್ಯರು ಏನು ವಾದವನ್ನು ಮಾಡಿದ್ದಾರೆ ಅದು ಸರಿಯಲ್ಲ. ಅದು ಸತ್ಯಕ್ಕೆ ದೂರವಾದುದು. ಯಾರೋ ಕೆಲವರಿಗೆ ಲಾಭ ಮಾಡಿಕೊಡಬೇಕು, ಸರ್ಕಾರಕ್ಕೆ ನಷ್ಟವಾದರೂ ಪರವಾಗಿಲ್ಲ ಎನ್ನುವ ಉದ್ದೇಶ ಸರ್ಕಾರಕ್ಕೆ ಇತ್ತು ಎನ್ನುವ ವಿಚಾರ ಇಲ್ಲಿ ಉದ್ಭವವಾಗುವುದಿಲ್ಲ.

ಮಾನ್ಯ ಸದಸ್ಯರು ಮತ್ತೊಂದು ವಿಚಾರವನ್ನು ಏನು ಪ್ರಸ್ತಾಪ ಮಾಡಿದರು ಎಂದರೆ, ನಾವು ಕೊಟ್ಟಿಂಥ ಅವಧಿಗೆ ಮಿಠಾ ಅವರು ಷುಗರ್ ಕೇನ್‌ನ್ನು ಕ್ರಷ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ ಎಂದು. ಈ ಹಿನ್ನೆಲೆಯಲ್ಲಿ I don't think it holds any water. ಅದು ಸರಿಯಲ್ಲ. ತಾ. ೫-೧೨-೮೦ಕ್ಕೆ ಹುಕುಂ ಕೊಟ್ಟಮೇಲೆ ಸರ್ಕಾರವಾಗಲಿ, ಡೈರೆಕ್ಟರ್ ಆಫ್ ಷುಗರ್ ಆಗಲಿ, ಅಥವಾ ಬೇರೆ ಯಾವುದೇ ಅಧಿಕಾರಿಗಳಾಗಲಿ ಏನೂ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಹೈ ಕೋರ್ಟ್‌ನವರು ಆದೇಶವನ್ನು ಕೊಟ್ಟಿದ್ದಾರೆ.

ಮಾನ್ಯ ಅಧ್ಯಕ್ಷರೆ, ಮತ್ತೊಂದು ಮೂಲಭೂತ ಪ್ರಶ್ನೆ ಎಂದರೆ, ಸರ್ಕಾರದ ಅಥವಾ ಸರ್ಕಾರೀ ಅಧಿಕಾರಿಗಳ ಒಂದು ಧೋರಣೆಯಿಂದಾಗಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಬಂತು ಎಂದರೆ ಅದರ ಅವಧಿಗೆ ಮುಂಚಿತವಾಗಿ ಮುಚ್ಚುವ ಪರಿಸ್ಥಿತಿಗೆ ಬಂತು ಎಂದು ಮಾನ್ಯ ಸದಸ್ಯರು ಹೇಳಿದರು. ಇದೂ ಕೂಡ ಸರ್ಕಾರದ ದೃಷ್ಟಿಯಲ್ಲಿ ಮತ್ತು ನನ್ನ ಹತ್ತಿರ ಇರತಕ್ಕ ಮಾಹಿತಿಯ ಪ್ರಕಾರ ಕೂಡ ಸರಿಯಲ್ಲ. ಏಕೆಂದರೆ, ೧೨ ಸಾವಿರ ಟನ್ ಷುಗರ್ ಕೇನ್ ಅದು ರಿಸರ್ವ್ಡ್ ಏರಿಯಾದಲ್ಲಿ it was available till 23rd March, 1981 ಅದು ಮುಗಿದನಂತರ ಮಾತ್ರ ಈ ಸಹಕಾರಿ ಸಕ್ಕರೆ ಕಾರ್ಖಾನೆ ಮುಚ್ಚಿತು. ಅಲ್ಲದೆ ಅವರ ಕ್ರಷಿಂಗ್ ಸೀಸನ್ ಕೂಡ ಮುಗಿಯಿತು. ಆದರೆ, ಈ ಖಿಂಡಸಾರಿಯವರ ಅತಿಕ್ರಮದಿಂದ ಮುಚ್ಚಿಹೋಗಿದೆಯೆಂದು ಹೇಳುವುದು ನಮಗೆ ಬಂದಿರತಕ್ಕ ಮಾಹಿತಿಯ ಪ್ರಕಾರ ಸರಿಯಲ್ಲ.

ಇನ್ನು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಗೆ ರಿಸರ್ವ್ಡ್ ಏರಿಯಾದಿಂದ ಹೊರತಾದ ಕಬ್ಬು ಏನಿತ್ತು ಅದು ೨೭ ಸಾವಿರ ಟನ್. ಅದನ್ನು ಕ್ರಷ್ ಮಾಡಬಾರದೆಂದು ಹೇಳುವ ಹಕ್ಕು ನಮಗೆ ಇಲ್ಲ. ಏಕೆಂದರೆ ಆ ಕಬ್ಬನ್ನು ಅವರು ಉಪಯೋಗಿಸಿಕೊಳ್ಳಲಿಕ್ಕೆ ಅವರಿಗೆ ಸಂಪೂರ್ಣವಾದ ಅಧಿಕಾರ ಇದೆ. ಆದ್ದರಿಂದ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. It was available as on 23rd March, 1981 ಆದರೆ ಅನ್ ರಿಸರ್ವ್ಡ್ ಏರಿಯಾದಲ್ಲಿ ಇದ್ದಂಥ ೨೭ ಸಾವಿರ ಟನ್ ಷುಗರ್ ಕೇನ್ ಏನಿದೆ ಅದನ್ನು ಕ್ರಷ್ ಮಾಡಬಾರದೆಂದು ಹೇಳತಕ್ಕ, ಅಥವಾ ತಡೆಹಿಡಿಯತಕ್ಕ ಯಾವುದೇ ಹಕ್ಕು ಅಥವಾ ಅಧಿಕಾರ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಗೆ ಇಲ್ಲ. ಆದ್ದರಿಂದ ಅವರು ಅದನ್ನು ಕ್ರಷ್ ಮಾಡಿದ್ದಾರೆ. ಆದರೆ ಅದನ್ನು ಮಾಡಬೇಡಿ ಎಂದು ನಾವು ಹೇಳಿದ್ದಿದ್ದರೆ ಇದರಿಂದ ಬಹಳ ಜನ ರೈತರಿಗೆ ತುಂಬಾ ತೊಂದರೆಯಾಗುತ್ತಿತ್ತು. ಏಕೆಂದರೆ because of distance and so many other things, like transportation charges. They were getting higher price from the concerned units. ಔಟ್ ಸೈಡ್ ದಿ ರಿಸರ್ವ್ಡ್ ಏರಿಯಾದಿಂದ ಒಳ್ಳೆಯ ಬೆಲೆ ಸಿಕ್ಕುವುದಿದ್ದರೆ ನಾವು ಅವರನ್ನು ಕಾನೂನು ಪ್ರಕಾರ ನಿಲ್ಲಿಸುವುದಕ್ಕಾಗುವುದಿಲ್ಲ. ಅವರಿಗೆ ಖಿಂಡ ಸಾರಿಯಲ್ಲಿ ಹೆಚ್ಚಿಗೆ ಆಕರ್ಷಣೆ ಇರುತ್ತದೆ. ಕಾರಣ ಅಲ್ಲಿ they will have their own play. ಆದ್ದರಿಂದ ಈ ಒಂದು ಪರಿಸ್ಥಿತಿಯೇ ಹೊರತು ಯಾವುದೇ ರೀತಿಯಲ್ಲೂ ನಮ್ಮ ಸರ್ಕಾರ ಅಧಿಕಾರಿಗಳು ಶಾಮೀಲಾಗಿರುವುದಾಗಲಿ, ಅಥವಾ ಬೇರೆ ರೀತಿ ನಡೆದುಕೊಂಡಿರುವುದಾಗಲಿ ಇಲ್ಲ. ಅವರು ಔಟ್‌ಸೈಡ್ ದಿ ರಿಸರ್ವ್ಡ್ ಏರಿಯಾದಲ್ಲಿ ಷುಗರ್ ಕೇನ್ ತೆಗೆದುಕೊಂಡಿದ್ದಾರೆ, ಮತ್ತು ಕ್ರಷ್

ಮಾಡಿದ್ದಾರೆ. ಅದಕ್ಕೆ ಹೈಕೋರ್ಟಿನ ಅಪ್ಪಣೆ ಕೂಡ ಇದೆ. ಈ ಎಲ್ಲ ಕಾರಣಗಳಿಂದಾಗಿ ಸರ್ಕಾರ ದವರು ಎನೂ ಮಾಡಂವುದಕ್ಕೆ ಸಾಧ್ಯವಿರಲಿಲ್ಲ. ಷುಗರ್ ಕೇನ್‌ನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಎಂದು ಬೀದರ್‌ನವರಿಗೆ ಹೇಳುವ ಅಧಿಕಾರ ನಮ್ಮ ಕೈಯಲ್ಲಿ ಇರಲಿಲ್ಲ. ನಮ್ಮ ಸರ್ಕಾರದ ಹತ್ತಿರ ಇದ್ದಂಥ ಮಾಹಿತಿಯನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ರಿಸರ್ವ್ಡ್ ಏರಿಯಾದಿಂದ ಕಬ್ಬನ್ನು ತೆಗೆದುಕೊಂಡು ಹೋಗಿದ್ದಾರೆ, ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ, ತನ್ಮೂಲಕ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಅವಧಿಗೆ ಮುಂಚೆ ನಿಂತುಬಿಟ್ಟಿದೆ ಎಂದು ಹೇಳುವುದಕ್ಕೆ ಕಾಂಕ್ರೀಟ್ ಆಗುವಂಥ ಪ್ರಕರಣಗಳನ್ನು ಕೊಟ್ಟರೆ ಅದನ್ನು ತನಿಖೆ ಮಾಡಿಸುವುದಕ್ಕೂ ನಾವು ಸಿದ್ಧವಾಗಿದ್ದೇವೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದುವರೆಗೂ ಹೇಳಿದ್ದನ್ನೆಲ್ಲಾ ಬಹಳ ತಾಳ್ಮೆಯಿಂದ ಕೇಳಂತ್ತಾ ಕುಳಿತಿದ್ದು ಅವರಿಂದ ಯಾವುದಾದರೂ ಒಂದು ಹೊಸ ಮಾಹಿತಿ ಸಿಕ್ಕಿದರೆ ಅವರ ಮೇಲೆ ತಕ್ಷಣ ತನಿಖೆಗೆ ಕ್ರಮವನ್ನು ತೆಗೆದುಕೊಳ್ಳೋಣವೆಂದು ಆತುರದಿಂದ ಕಾಯುತ್ತಿದ್ದೆ. ಆದರೆ, ಮಾನ್ಯ ಸದಸ್ಯರು ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಕಾಂಕ್ರೀಟ್ ಇನ್‌ಸ್ಟೆನ್ಸಸ್‌ನ್ನೂ ಕೊಡಲಿಲ್ಲ. ಅವರು ಗುಟ್ಟಿನಲ್ಲಿ ಕೊಡಬೇಕೆಂದಿದ್ದರೆ, ಯಾವ ಅಧಿಕಾರಿಗಳು ಶಾಮೀಲಾಗಿದ್ದರು, ಎಲ್ಲಿ ಆಗಿದ್ದರು, ರಿಸರ್ವ್ಡ್ ಏರಿಯಾದಲ್ಲಿ ಎಷ್ಟು ಕಬ್ಬು ಹೋಯಿತು ಎನ್ನುವ ಬಗ್ಗೆ ಸ್ವಲ್ಪವಾದರೂ ನಮಗೆ ಮಾಹಿತಿ ಕೊಡಬಹುದು, ಅಥವಾ ಸದನದ ಮುಖಾಂತರ ಬೇಕಾದರೂ ಹೇಳಬಹುದು. ಯಾರಾದರೂ ಅಧಿಕಾರಿಗಳು ತಪ್ಪು ಹೆಜ್ಜೆಯನ್ನಿಟ್ಟಿರುವುದಾದರೆ ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಲಿಕ್ಕೂ ನಾವು ಬದ್ಧರಿದ್ದೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. If the hon. member bring to our notice any concrete instances we are prepared to investigate into the matter.

ಶ್ರೀ ಭೀಮಣ್ಣ ಖಂಡ್ರೆ.—ಖಂಡ ಸಾರಿಗೆ ಸಂಬಂಧಪಟ್ಟಂತೆ ಅರ್ಜಿಗಳು ಎಷ್ಟು ವರ್ಷದಿಂದ ಪೆಂಡಿಂಗ್ ಇದ್ದುವು ? ನನಗೆ ತಿಳಿದಂತೆ ಸುಮಾರು ೨ ತಿಂಗಳವರೆಗೆ ಪೆಂಡಿಂಗ್ ಇದ್ದರೂ ಅವುಗಳನ್ನು ಏತಕ್ಕೆ ಇತ್ಯರ್ಥ ಮಾಡಲಿಲ್ಲ ? ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೀರಾ ?

ಇನ್ನು ಎರಡನೆಯದಾಗಿ, ಮಾರ್ಚ್ ೧೨ನೇ ತಾರೀಖಿನ ನಾವು ಅರ್ಜಿಗಳನ್ನು ಕೊಟ್ಟಾಗ ಎಲ್ಲ ಖಂಡಸಾರಿಗಳ ಅವಧಿಯೂ ಮುಗಿದಿರಲಿಲ್ಲ. ಅವರು ಲೈಸೆನ್ಸ್ ಇಲ್ಲದೆ ಫ್ಯಾಕ್ಟರಿಗಳನ್ನು ನಡೆಸುತ್ತಿದ್ದರು. ಇದು ತಮ್ಮ ಗಮನಕ್ಕೆ ಬಂದಿತ್ತೇ ಅಥವಾ ಇಲ್ಲವೆ ? ತಾವು ಇದನ್ನು ವೆರಿಫೈ ಮಾಡಬೇಕು. ಸಹಕಾರ ಖಾತೆ ಸಚಿವರು ಯಾವಾಗ ಆರ್ಡರ್ ಮಾಡಿದರು ಎನ್ನುವ ಬಗ್ಗೆ ತಾವು ಉತ್ತರ ಕೊಡಲಿಲ್ಲ. ತಾವು ಏತಕ್ಕೆ ಈ ರೀತಿ ಮಿಸ್ ಗೈಡ್ ಮಾಡುತ್ತಿದ್ದೀರಿ?

ಇನ್ನು ಮೂರನೆಯದಾಗಿ, ತಾವು ಏನು ಉತ್ತರವನ್ನು ಕೊಟ್ಟಿದ್ದೀರಿ ಅದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ತಾವೇ ಯೋಚನೆ ಮಾಡಿ ನೋಡಿ. ಈಗ ತಾವು ಹೇಳುತ್ತಿದ್ದೀರಿ ತಾ. ೫–೧೨–೬೦ ರಲ್ಲಿ ಹೈ ಕೋರ್ಟ್‌ನವರು ಆರ್ಡರ್ ಮಾಡಿದರು, ಆದರೆ ತಮ್ಮ ಉತ್ತರದಲ್ಲಿ ೨೭–೧೧–೬೦ ಅಂತ ಇದೆ. ಈ ಎರಡು ಉತ್ತರಗಳ ಪೈಕಿ ಯಾವುದು ಸರಿ ಎಂಬುದನ್ನು ದಯವಿಟ್ಟು ತಿಳಿಸಬೇಕು. ಅಥವಾ ಹೈಕೋರ್ಟ್‌ನವರು ಜಡ್ಜ್‌ಮೆಂಟ್ ಕೊಟ್ಟಿರುವುದರಲ್ಲಿ ಏನಾದರೂ ವ್ಯತ್ಯಾಸ ಇದೆಯೆ ? ಅಥವಾ ಹೈಕೋರ್ಟ್ ಜಡ್ಜ್‌ಮೆಂಟ್‌ಗಳು ೨ ಇವೆಯೆ ? ಇಲ್ಲಿ ತಾವೇ ಹೇಳಿದ್ದೀರಿ The Court directed the Director of Sugar to dispose of the applications filled before him expeditiously. ಇದರ ಅರ್ಥ ಏನೆಂದರೆ ೨ ತಿಂಗಳಿಂದ ಅರ್ಜಿಗಳು ಪೆಂಡಿಂಗ್ ಇದ್ದವು ಎಂದಾಗುತ್ತದೆ. ಹಾಗಾದರೆ ೨ ತಿಂಗಳಿಂದ ಏತಕ್ಕೆ ಪೆಂಡಿಂಗ್ ಇದ್ದುವು ?

ಆದಾದನಂತರ ಮಾನ್ಯ ಮುಖ್ಯಮಂತ್ರಿಯವರು ಕೋ–ಆಪರೇಟೀವ್ ಮಂತ್ರಿಗಳೂ ಆರ್ಡರ್ ಮಾಡಿದ ಡೇಟ್ ಕೂಡ ಕೊಟ್ಟಿದ್ದೇನೆ. ತಮ್ಮಲ್ಲಿಯೇ ಕೊಟ್ಟಿದ್ದೇನೆ ತಾವು ಬೇಕಾದರೆ ನೋಡಿ. ಆರ್ಡರ್ ಆದನಂತರ, ಲೈಸೆನ್ಸ್ ಇಲ್ಲದೆ ೯ ಖಂಡಸಾರಿ ಫ್ಯಾಕ್ಟರಿಗಳು ಹೇಗೆ ನಡೆದಿವೆ ಎಂದು ಪ್ರಶ್ನೆ ಕೇಳಂತ್ತಿದ್ದೇನೆ. ತಾವು ಹೇಳಿದಿರಿ ರಿಸರ್ವ್ಡ್ ಏರಿಯಾ ೧೨ ಸಾವಿರ ಟನ್ ಇದ್ದುದು ಈಗ ೨೦ ಸಾವಿರ ಆಯಿತು ; ೮ ದಿವಸದಿಂದ ರಿಜೆಕ್ಟ್ ಮಾಡುವುದಕ್ಕೆ ಏನು ಕಾರಣವೆಂದು ಕೇಳಿದಕ್ಕೆ ತಾವು ಏನು ಕೊಟ್ಟಿದ್ದೀರಿ ೯೦ ದಿವಸದಲ್ಲಿ ತಾವು ಖಂಡಸಾರಿ ಕ್ರಶ್ ಮಾಡಿದ್ದು ೫ ಸಾವಿರದಿಂದ ೬ ಸಾವಿರವೆಂದು ಹೇಳಿದಿರಿ. ತಾವು ಹೇಳಿದ ಪ್ರಕಾರ ೨೭ ಸಾವಿರ ಟನ್ ೯ ಕಂಡಸಾರಿಗಳು ೮ ದಿವಸದಲ್ಲಿ ಅರೆಯುವುದಕ್ಕೆ

ಸಾಧ್ಯವಿಲ್ಲ. ಇದು ತಪ್ಪು ರಿಪೋರ್ಟ್ ಆಗಿರುತ್ತದೆ. ಆರು ಸಾವಿರ ಟನ್ ೯೦ ದಿವಸದಲ್ಲಿ ಕ್ರಸ್ ಮಾಡಿದರೆ ೮ ದಿವಸಗಳಲ್ಲಿ ೨೭ ಸಾವಿರ ಟನ್ ಹೇಗೆ ಕ್ರಶ್ ಮಾಡಿದಿರಿ ಎಂದು ನಾನು ಕೇಳಬೇಕಾಗುತ್ತದೆ.

ಅಧ್ಯಕ್ಷರು —ಮಾನ್ಯ ಭೀಮಣ್ಣ ಕಂಡ್ರೆಯವರೇ ತಾವು ಏನು ಕೇಳಬೇಕು ಎಂದು ಆಲೋಚನೆ ಮಾಡುವುದರಲ್ಲಿಯೇ ಟೈಮ್ ಕಳೆದುಹೋಗುತ್ತದೆ. ಆಫ್ ಎನ್ ಹಪರ್ ಡಿಸ್‌ಕಷನ್ ಎಂದರೆ ಮನೆಯಲ್ಲಿ ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬರಬೇಕು ಏನು ಬಿಟ್ಟುಹೋಗಿದೆ, ಎನು ಕೇಳಬೇಕಂ, ಸರ್ಕಾರದಿಂದ ಏನು ಸಮಾಜಾಯಿಷಿ ಪಡೆದುಕೊಳ್ಳಬೇಕು ಎನ್ನುವುದನ್ನೆಲ್ಲಾ ಸರಿಯಾಗಿ ನೋಡಿಕೊಂಡು ಬರಬೇಕು. ತಾವು ಆದನ್ನು ಬಿಟ್ಟುಬಿಟ್ಟು ಪಕೀಲರ ರೀತಿಯಲ್ಲಿ ಕ್ರಾಸ್ ಎಕ್ಸಾಮಿನೇಷನ್ ಮಾಡುತ್ತಾ ಹೊದರೆ ಕಾಲ ಎಲ್ಲಿ ಇರುತ್ತದೆ. ತಾವು ೫–೫೫ರಲ್ಲಿ ಪ್ರಾರಂಭ ಮಾಡಿದಿರಿ, ಇನ್ನು ಎಷ್ಟು ನಿಮಿಷ ಇದೆ ತಾವೇ ನೋಡಿ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ನಾನು ಕ್ರಾಸ್ ಎಕ್ಸಾಮಂ ಮಾಡುವುದಕ್ಕೆ ಹೋಗುವುದಿಲ್ಲ. ಆಪ್ರೊಪಿಷನ್‌ನಲ್ಲಿ ಇದ್ದು ಹಾಗಾಗಿ ಹೋಗಿದೆ. ನಾನು ರೂಲಿಂಗ್ ಪಾರ್ಟಿ ಮೆಂಬರ್ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು —ರೂಲಿಂಗ್ ಪಾರ್ಟಿ ಮೆಂಬರ್ ಎಂದರೆ ಮೇಲಿನಿಂದ ಅಂದರೆ ಆಕಾಶದಿಂದ ಬರುತ್ತಿದ್ದಾರೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಆ ಕಡೆಯಿಂದ ಬರುತ್ತಿದ್ದಾರೆ. ಅಧ್ಯಕ್ಷರೇ ಅವರ ಪ್ರಶ್ನೆ ಇಷ್ಟೇ. I can give the date of application. licence period, ಯೂನಿಟ್ ಹೆಸರೂ ಕೂಡ ಇದೆ. ಹೈಕೋರ್ಟ್ ಆರ್ಡರ್ ೫–೧೨–೮೦ ರಲ್ಲಿ ಬಂದಿದೆ. ಅದನ್ನೂ ಕೂಡ ಕ್ಲಾರಿಫೈ ಮಾಡುತ್ತೇನೆ. ಆರ್ಡರ್ ೫–೧೨–೮೦ರಲ್ಲಿ ಕೊಟ್ಟಿದ್ದಾರೆ. There is no ambiguity about it That is clarified. ಆರ್ಡರ್ ೫–೧೨–೮೦ರಲ್ಲಿ ಕೊಟ್ಟಿದ್ದಾರೆ. ಎಕ್ಸ್‌ಪೈರಿ ಡೇಟ್ ೯–೧೦–೧೪–೦೫ ಇರಬಹುದು. In between they have gone and obtained the stay. ಇದಕ್ಕೆ ಸರ್ಕಾರ ಏನು ಮಾಡಲಿಕ್ಕೆ ಬರುತ್ತದೆ ? Can you stop crushing ? Can you ask them to stop ? In between they have gone and obtained the order of the High Court which is very clear. On 5th December, 1980 after hearing all the appeals filed in this behalf the High Court passed an order directing the Director of Sugar "to consider and dispose of the application for grant of licence expeditiously. Whenever such applications are made it would also be proper for him and during the pendency of such application with him, not to proceed against such of those petitioners units as have applied for licence for closure of their factories or units on the ground that they do not immediately possess a licence until further orders". ಈ ಕಾರಣದಿಂದಲೇ ಇನ್ನಿತರ ಫ್ಯಾಕ್ಟರಿಯವರಿಗೆ ಮತ್ತೆ ಲೈಸೆನ್ಸ್ ನೀಡಿಲ್ಲ. ಇದಂ ಹೀಗೆ ಇರುವಾಗ ನಾವು ಅವನ್ನು ಹೇಗೆ ಬಂದ್ ಮಾಡಬೇಕು ? There is a cause of action. ಅದಂ ಏನೆಂದರೆ ರಿಸರ್ವ್ ಏರಿಯಾದಲ್ಲಿ ಇರತಕ್ಕಂಥ ಕಬ್ಬನ್ನು ಏರ್ಚುವುದಕ್ಕೆ ಇನ್‌ಫರ್‌ಮೇಷನ್ ಕೇಳುತ್ತಿದ್ದೇನೆ ; so that he can help us.

ಶ್ರೀ ಎಸ್. ಆರ್ ಬೊಮ್ಮಾಯಿ.—ಷುಗರ್ ಫ್ಯಾಕ್ಟರಿಯವರು, ರೈತರು ಕಷ್ಟಪಟ್ಟು ಬೆಳೆದ ಕಬ್ಬನ್ನು ತೆಗೆದುಕೊಳ್ಳದಿದ್ದರೆ ಕಬ್ಬೆಲ್ಲ ಒಣಗಿಹೋಗುತ್ತದೆ. ನಮ್ಮ ಕಡೆ ಈ ವಿಚಾರ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಆದನ್ನೇ ಹೇಳಿದೆ. ಹೀಗೆ ಆಗತಕ್ಕಂಥ ಪರಿಸ್ಥಿತಿ ಬರುತ್ತದೆ. ಖಂಡಸಾರಿ ಕ್ಲೋಸ್‌ಮಾಡಿ ಆನ್‌ರಿಸರ್ವ್ಡ್ ಏರಿಯಾ ಕಬ್ಬನ್ನು ಒಣಗಲಿಕ್ಕೆ ಬಿಡುತ್ತೇವೆಂದು ಯೋಚಿಕ್ಕೆ ಬರುವುದಿಲ್ಲ I think legally we are not entitled. Perhaps if he can throw some light in regard to the crushing or the removal of the sugarcane from the reserved area and taken to the Khandasari units

then crushed, th n there is a cause of action and kindly Hon. member may point out. That is the minimum information you can give and help the Government to take action. I do not say that there is no force in h's argument. I am just appealing to the Hon. member to help the Government to find out the culprit, to find out the mistakes or errors committed. I never say he has no point. But, the only thing is ಮಾನ್ಯ ಖಂಡ್ರೆಯವರು ರೈತರ ಬಗ್ಗೆ ಬಹಳ ಕಳಕಳಿ ಇರತಕ್ಕಂಥ ಪ್ರಮುಖ ಸದಸ್ಯರು. ರೈತರ ಸಮಸ್ಯೆ ವಿಚಾರ ಏನಾದರೂ ಗವರ್ನಮೆಂಟಲ್ಲಿಟ್ಟುಕೊಂಡು ಮಾತನಾಡುವಾಗ ಇಡೀ ಆಕಾಶದ ಕೆಳಗೆ ಏನು ಇದೆ ಅದನ್ನೆಲ್ಲಾ ಮಾತನಾಡಿಬಿಡುತ್ತಾರೆ. ಆದರೆ ಎಲ್ಲಿ ಪಾಯಿಂಟ್‌ಔಟ್ ಮಾಡಬೇಕೋ ಅದನ್ನು ಮಾಡುವುದೇ ಇಲ್ಲ. This is the only defect. I think, I am making an appeal on behalf of the Member, to give him some more opportunity to raise another question so that he can send a pointed question and get an answer from the Government.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಚಿವರು, ಮಂತ್ರಿ ಸದಸ್ಯರು ಪ್ರತ್ಯೇಕವಾಗಿ ಚೇಂಬರ್‌ನಲ್ಲಿ ಕುಳಿತುಕೊಂಡು ಮಾತನಾಡಲಿ.

MR. SPEAKER.—That offer was already there by the Hon. Minister.

SRI M. VEERAPPA MOILY.—That, I can do. If the Hon. Member has got information we will discuss. If he can point out, I will definitely accept your suggestion and act upon it.

Statement

Reg:—Sugarcane prices for 1982-83.

ಶ್ರೀ ಎಂ. ವೀರಪ್ಪಮೊಯ್ಲಿ.— ಸನ್‌ಮಾನ್ಯ ಅಧ್ಯಕ್ಷರೇ ಷುಗರ್ ಕೇನ್ ಪ್ರೈಸ್ ಬಗ್ಗೆ ಕಳೆದಬಾರಿ ಪ್ರಕಟಣೆ ಮಾಡಿದ್ದೇನೆ. ಏತನ್‌ಮಧ್ಯೆ ಮಂಡ್ಯಾದ ರೈತರು ಕಬ್ಬನ್ನು ಕೊಡದೆ ಒಂದು ರೀತಿ ಅಲ್ಲಿ ಸಕ್ಕರೆ ಕಾರ್ಖಾನೆ ನಿಂತುಹೋಗಿದೆ. ನಿನ್ನೆತಾನೆ ಸನ್‌ಮಾನ್ಯ ಮಿತ್ರರು, ರೈತರ ಪ್ರತಿನಿಧಿಗಳು, ಮಂಡ್ಯದಿಂದ ಬಂದಿರತಕ್ಕ ರೈತ ಪ್ರತಿನಿಧಿಗಳು ಎಲ್ಲಾ ಮಾತನಾಡಿಕೊಂಡು ಒಂದು ರೀತಿ ಒಪ್ಪಂದಕ್ಕೆ ಬಂದಿರುತ್ತೇವೆ. ಬಹುಶಃ ರೈತ ಸಮುದಾಯ ಒಮ್ಮತದ ಅಭಿಪ್ರಾಯಕ್ಕೆ ಸರ್ಕಾರದವರು ಬಂದು ಮಾನ್ಯ ಖಂಡ್ರೆಯವರು ಹೇಳಿದ ರೀತಿಯಲ್ಲಿ ಸರ್ಕಾರದ ಪ್ರತಿಷ್ಠೆ ಮಾಡುತ್ತಿಲ್ಲ, ಸರ್ಕಾರ ಯಾವಾಗಲೂ ರೈತರಿಗೆ ಅನುಕೂಲವಾಗುವಂತೆ ತಿದ್ದುಪಡಿಗಳನ್ನು ಮಾಡಲಿಕ್ಕೆ ಸಿದ್ಧರಾಗಿ ಇದ್ದೇವೆ. ಈ ದೃಷ್ಟಿಯಿಂದ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡಲು ತಮ್ಮ ಅನುಮತಿಯನ್ನು ಪಡೆಯುತ್ತಿದ್ದೇನೆ. ಹೇಳಿಕೆ ಓದಲು ಅಪ್ಪಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ತಮ್ಮ ಹೇಳಿಕೆಯನ್ನು ಓದಬಹುದು.

6-30 P. M.

SRI M. VEERAPPA MOILY (Minister for Finance).—As the Members are aware, Government have advised all the sugar factories in the State to make the first uniform advance payment of Rs. 180 per tonne Ex-factory to the sugarcane supplied during the crushing season 1982-83 including the special season. Besides, Government have also agreed to continue the payment of refund of Purchase Tax at Rs. 6-80 per tonne, as was done during last year.